ಕರ್ನಾಟಕ ಸರಕಾರ
Government of Karnataka
ಗ್ರಾಮ ಪಂಚಾಯತ ಕಾರ್ಯಾಲಯ ದೇವರಗುಡಿಹಾಳ , ಹುಬ್ಬಳ್ಳಿ ತಾಲೂಕ ಧಾರವಾಡ ಜಿಲ್ಲೆ
OFFICE OF THE PANCHAYAT DEVELOPMENT OFFICER, GRAM PANCHAYAT DEVARAGUDIHAL
TALUK HUBLI DISTRICT DHARWAD
Phone No: 9986494602 E-mail:

ಸಂ:ಗ್ರಾಪಂದೇ/ಬಮುಪ್ರಪ/2024-25 /01 ದಿನಾಂಕ :09/07/2024

**ವಿಷಯ: ಹುಬ್ಬಳ್ಳಿ ತಾಲೂಕ ದೇವರಗುಡಿಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ರೇವಡಿಹಾಳ ಗ್ರಾಮದ ರಿಸನಂ 92/ಬ್ಲಾಕ್/4 ಕ್ಷೇತ್ರ 04- ಎಕರೆ 00-ಗುಂ 00-ಆಣೆ ವಸತಿ ವಿನ್ಯಾಸದ ಪ್ರದೇಶದಲ್ಲಿನ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಮುಕ್ತಾಯ ಪ್ರಮಾಣ ಪತ್ರ ನೀಡುವ ಕುರಿತು.**

**ಉಲ್ಲೇಖ:** 1) ಶ್ರೀ ಡೆವಲಪರ್ಸ್ ಇವರ ಪರವಾಗಿ ಶ್ರೀ ಶ್ರೀನಿವಾಸ ಏಕಬೋಟೆ ಮತ್ತು ಶ್ರೀ ಮತಿ ವಿಜಯಲಕ್ಷ್ಮೀ ಏಕಬೊಟೆ ಮನವಿ ಪತ್ರ ದಿನಾಂಕ:21-5-2024
2) ಕಾರ್ಯನಿರ್ವಾಹಕ ಅಭಿಯಂತರರು (ವಿ) ಕಾ ಮತ್ತು ಪಾ,ಗ್ರಾಮೀಣ ಉಪ ವಿಭಾಗ ಹುಬ್ಬಳ್ಳಿ ಇವರ ಪತ್ರ ಕ್ರಸಂ/ಹುಬ್ಬಳ್ಳಿ/ಹೆಸ್ಕಾಂ/ಇಇ(ಇ)/ರುರಲ್/ಎಇಇ(ಒ)/ಎಇ(ಟಿ)/24-25 ದಿನಾಂಕ 20-5-2024.

## ಪ್ರಸ್ತಾವಣೆ:

ಹುಬ್ಬಳ್ಳಿ ತಾಲೂಕ ದೇವರಗುಡಿಹಾಳ ಗ್ರಾಮ ಪಂಚಾಯತ ವ್ಯಾಪ್ತಿಯ ರೇವಡಿಹಾಳ ಗ್ರಾಮದ ರಿಸನಂ 92/ಬ್ಲಾಕ್/4 ಕ್ಷೇತ್ರ 04- ಎಕರೆ 00-ಗುಂ 00-ಆಣೆ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆಗಿದ್ದು ಸ್ಥಳೀಯ ಯೋಜನಾ ಪ್ರಾದಿಕಾರವಾದ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಧಾರವಾಡ ರವರು ಬಡಾವಣೆ ನಕ್ಷೆಯನ್ನು ತಾಂತ್ರಿಕವಾಗಿ ಅನೂಮೋದನೆ ನೀಡಿದನ್ವಯ ತಮ್ಮ ಮಂಜೂರಾತಿ ಆದೇಶದಲ್ಲಿನ ಬಡಾವಣೆ ವಿನ್ಯಾಸದಲ್ಲಿನ ಮೂಲ ಸೌಕರ್ಯಗಳನ್ನು ಅಭಿವೃದ್ದಿಪಡಿಸಬೇಕಾದ ಅಂಶಗಳನ್ನು ಸದರಿ ಸ್ವತ್ತಿನ ಅರ್ಜಿದಾರರು ಪೂರೈಸಿದ ಕುರಿತು ಮೇಲ್ಕಾಣಿಸಿದ ಉಲ್ಲೇಖದಡಿ ತಿಳಿಸಿ ಸದರಿ ಬಡಾವಣೆಯ ಮುಕ್ತಾಯ ಪ್ರಮಾಣ ಪತ್ರ ಕೋರಿರುತ್ತಾರೆ.ಅದರನ್ವಯ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

## ಮುಕ್ತಾಯ ಪ್ರಮಾಣ ಪತ್ರ

ಹುಬ್ಬಳ್ಳಿ ತಾಲೂಕ ದೇವರಗುಡಿಹಾಳ ಗ್ರಾಮ ಪಂಚಾಯತ ವ್ಯಾಪ್ತಿಯ ರೇವಡಿಹಾಳ ಗ್ರಾಮದ ರಿಸನ92/ಬ್ಲಾಕ್/4 ಕ್ಷೇತ್ರ 04- ಎಕರೆ 00-ಗುಂ 00-ಆಣೆ ವಸತಿ ವಿನ್ಯಾಸದ ಮಾಲಕರು/ಅಭಿವೃದ್ಧಿದಾರರು **ಶ್ರೀ ಡೆವಲಪರ್ಸ್ ಇವರ ಪರವಾಗಿ ಶ್ರೀ ಶ್ರೀನಿವಾಸ ಏಕಬೋಟೆ ಮತ್ತು ಶ್ರೀ ಮತಿ ವಿಜಯಲಕ್ಷ್ಮೀ ಏಕಬೊಟೆ** ಇವರು ಗ್ರಾಮ ಪಂಚಾಯತಿ ದೇವರಗುಡಿಹಾಳಕ್ಕೆ ಸಲ್ಲಿಸಿದ ಅರ್ಜಿಯಲ್ಲಿನ ಅಂಶಗಳನ್ನು ಪರಿಗಣಿಸಿ ಹಾಗೂ ಸ್ಥಾನೀಕವಾಗಿ ಪರಿಶೀಲಿಸಿ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯ ,ಉದ್ಯಾನವನ ಮತ್ತು ರಸ್ತೆಯನ್ನು ಮುಕ್ಕಟೆಯಾಗಿ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಿರುತ್ತಾರೆ ಬಡಾವಣೆಯನ್ನು ಅಭಿವೃದ್ಧಿಪಡಿಸಿರುತ್ತಾರ ಹೆಸ್ಕಾಂ ಹುಬ್ಬಳ್ಳಿ ಇವರಿಗೆ ಭರಿಸಬೇಕಾದ ಮೊತ್ತವನ್ನು ಭರಿಸಿರುತ್ತಾರೆ ಮತ್ತು ನೀರಾಪೇಕ್ಷಣಾ ಪ್ರಮಾಣ ಪತ್ರ ಲಗತ್ತಿಸಿರುತ್ತಾರೆ.ಈ ಕೆಳ ಕಾಣಿಸಿದ ಷರತ್ತುಗಳನ್ನೊಳಪಟ್ಟು ಸದರಿ ಮೇಲ್ಕಾಣಿಸಿದ ವಸತಿ ವಿನ್ಯಾಸದ ಬಡಾವಣೆಗೆ ಸಂಬಂದಿಸಿದ ಅಭಿವೃದ್ಧಿ ಕಾಮಗಾರಿಗಳ ಷರತ್ತಿಗೆ ಒಳಪಟ್ಟು ಮುಕ್ತಾಯ ಪ್ರಮಾಣ ಪತ್ರ ನೀಡಲಾಗಿದೆ.

1) ಗ್ರಾಮ ಪಂಚಾಯತ ದೇವರಗುಡಿಹಾಳ ರವರ ನಿರ್ದೇಶನದಂತೆ ವಿದ್ಯುತ್ ಕಂಬಗಳಿಗೆ ಬೀದಿ ದೀಪಗಳನ್ನು ಅಳವಡಿಸುವುದು.

2) ನೀರು ಸರಭರಾಜು ಹಾಗೂ ಒಳಚರಂಡಿ ಕಾಮಗಾರಿ ಕುರಿತು ಮುಖ್ಯ ಕೊಳವೆ ಲಭ್ಯವಾದಾಗ ಜೋಡನೆ ಮಾಡಲು ತಮ್ಮ ಸ್ವಂತ ಖರ್ಚಿನಲ್ಲಿ ಜೋಡನೆ ಮಾಡುವುದು.

3) ಸದರ ಬಡಾವಣೆಯಲ್ಲಿ ಪ್ರತಿಶತ 30% ಮನೆಗಳ ನಿರ್ಮಾಣದ ನಂತರ ಗ್ರಾಮ ಪಂಚಾಯತಿಯಿಂದ ಮೂಲಭೂತ ಸೌಲಭ್ಯ ಕಲ್ಪಿಸಲಾಗುವುದು.ಸ್ಥಳೀಯ ಸಂಸ್ಥೆ ತಿಳಿಸುವ ಅವಧಿವರೆಗೆ ವಸತಿ ಉದ್ದೇಶದ ವಿನ್ಯಾಸದಲ್ಲಿ ಮೂಲ ಸೌಕರ್ಯಗಳನ್ನು ವಿನ್ಯಾಸದಾರರು ಮಾಡುವುದು ಮತ್ತು ಕುಡಿಯುವ ನೀರಿಗಾಗಿ ಬೋರವೆಲ್ ಕೊರೆಸುವುದು.

4) ಸದರ ಬಡಾವಣೆಯಲ್ಲಿ ಸ್ಥಳೀಯ ಸಂಸ್ಥೆ ಸೂಚಿಸುವ ಅವಶ್ಯಕ ಇನ್ನಿತರ ಕಾಮಗಾರಿ ಬಾಕಿ ಅಂತಾ ಕಂಡು ಬಂದಲ್ಲಿ ಕಾಮಗಾರಿ ನಿರ್ವಹಿಸುವುದು.

5) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೇ 1961 ರ ತಿದ್ದುಪಡಿ ಕಲಂ 17(2ಎ) ರನ್ವಯ ಸದರ ವಿನ್ಯಾಸಕ್ಕೆ ಅಂತಿಮ ಅನೂಮೋದನೆಯನ್ನು ಸ್ಥಳೀಯ ಸಂಸ್ಥೆಯಿಂದ ಪಡೆಯುವ ಷರತ್ತಿಗೆ ಒಳಪಟ್ಟು ಮುಕ್ತಾಯ ಪ್ರಮಾಣ ಪತ್ರ ನೀಡಿದೆ.

ತಮ್ಮ ವಿಶ್ವಾಸಿ

ಸ್ಥಳ: ದೇವರಗುಡಿಹಾಳ
ದಿನಾಂಕ: 09/07/2024

ಪಂಚಾಯತ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯತ, ದೇವರಗುಡಿಹಾಳ
ತಾ॥ ಹುಬ್ಬಳ್ಳಿ, ಜಿ॥ ಧಾರವಾಡ